CC No.:999/2018
P.W.:1

ಈ ದಿನ ದಿಃ17.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಸ್.ವಿ.ವಿ ವಕೀಲರಿಂದಃ-**

ನಾನು ಗೃಹಿಣಿಯಾಗಿರುತ್ತೇನೆ. ನನ್ನ ಅಳಿಯನ ಹೆಸರು ಶ್ರೀನಿವಾಸ್ ಎಂದು ಇರುತ್ತದೆ. ನನ್ನ ಅಳಿಯ ಶ್ರೀನಿವಾಸ್ ಬಡ್ಡಿ ವ್ಯವಹಾರ ಮತ್ತು ಚೀಟಿ ವ್ಯವಹಾರ ಮಾಡುತ್ತಾನೆಂದರೆ ನನಗೆ ಗೊತ್ತಿಲ್ಲ. ಆರೋಪಿತಳು ನನಗೆ ಅಂದಾಜು 20 ವರ್ಷಗಳಿಂದ ಪರಿಚಿತಳಿರುತ್ತಾಳೆ. ಆರೋಪಿತಳು ಕೆಲಸಕ್ಕೆಂದು ಶಾಲೆಗೆ ಹೋಗುತ್ತಾಳೆ. ಆದರೆ ನಿಖರವಾಗಿ ಗೊತ್ತಿರುವುದಿಲ್ಲ. ಆರೋಪಿತಳಿಗೂ ನನ್ನಷ್ಟೆ ವಯಸ್ಸಾಗಿದೆ ಎಂದರೆ ಸರಿ. ಆರೋಪಿತಳು ಈಗ ಒಬ್ಬಳೆ ಇರುತ್ತಾಳೆ ಎಂದರೆ ಸರಿ.

ನಾನು ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ನನ್ನ ಅಳಿಯ ಆರೋಪಿತಳ ವಿರುದ್ಧ ಬೇರೊಂದು ಪ್ರಕರಣ ದಾಖಲಿಸಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು 2 ಲಕ್ಷದ ಚೆಕ್ಕಿನ ಕುರಿತಾಗಿ ಸಲ್ಲಿಸಿರುತ್ತೇನೆ. ಮೊದಲು ಧರ್ಮಸ್ಥಳ ಸ್ತ್ರೀಶಕ್ತಿ ಸಂಘದಲ್ಲಿದ್ದೆನು, ಆರೋಪಿತಳು ಯಾವ ಸಂಘದಲ್ಲಿ ಇದ್ದಳು ಎಂದು ನನಗೆ ಗೊತ್ತಿಲ್ಲ.

ದಿ.6.08.2018 ರಂದು ಆರೋಪಿತಳಿಗೆ ನಾನು ಹಣ ನೀಡಿರುತ್ತೇನೆ. ಆರೋಪಿತಳು ಹಣ ಕೇಳಿದ 15 ದಿನಗಳ ನಂತರ ಹಣ ನೀಡಿರುತ್ತೇನೆ. ನಮ್ಮ ಮನೆಯಲ್ಲಿದ್ದ ಹಣವನ್ನು ಆರೋಪಿತಳಿಗೆ ನೀಡಿರುತ್ತೇನೆ. ನನ್ನ ಮನೆ ಭೋಗ್ಯ ಹಾಕಿ ಬಂದ ಹಣವನ್ನು ಆರೋಪಿತಳಿಗೆ ನೀಡಿರುತ್ತೇನೆಂದು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ. ಆರೋಪಿತಳು ಮದುವೆಗಾಗಿ ಹಣದ ಅವಶ್ಯಕತೆ ಇರುತ್ತದೆ ಎಂದು ಹೇಳಿ ನನ್ನಿಂದ ಹಣ ಪಡೆದಿರುತ್ತಾಳೆ. ನನ್ನ ಮಗಳು ಮತ್ತು ಅಳಿಯನಿಂದ ಹಣ ಪಡೆದು ನಿಮಗೆ ನೀಡಿರುತ್ತೇನೆಂದು ವಕೀಲರ ಮೂಲಕ ಕಳುಹಿಸಿದ ನೋಟಿಸ್ಸಿನಲ್ಲಿ ಹೇಳಿ ಬರೆಯಿಸಿರುವುದಿಲ್ಲ.

CC No.:999/2018
P.W.:1

ಮನೆಯ ಭೋಗ್ಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ. ಆರೋಪಿತಳಿಗೆ ನನ್ನ ಮನೆಯಲ್ಲಿ ಹಣ ನೀಡಿರುತ್ತೇನೆ. ನಾನು ಆರೋಪಿಗೆ ನೀಡಿದ ಹಣದ ಮುಖಬೆಲೆ ಹೇಳಲು ಬರುವುದಿಲ್ಲ. 2018 ಕ್ಕಿಂತ ಮೊದಲೆ ಆರೋಪಿತಳ ಮಕ್ಕಳ ಮದುವೆ ಆಗಿಹೋಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮದುವೆಗಾಗಿ ಮತ್ತು ಸೈಟ್ ಪಡೆದುಕೊಳ್ಳಲು ಎಂದು ಹೇಳಿ ನನ್ನಿಂದ ಹಣ ಪಡೆದಿರುತ್ತಾಳೆ.

ನಾನು ಬೇರೆ ವ್ಯವಹಾರಗಳನ್ನು ಚೆಕ್ ಮೂಲಕ ಮಾಡುವುದಿಲ್ಲ. 2 ಲಕ್ಷ ಹಣ ನಮಗೆ ದೊಡ್ಡ ಮೊತ್ತದ ಹಣ ಎಂದರೆ ಸರಿ. ಆರೋಪಿತಳು ಹೂ ಕಟ್ಟುವ ವ್ಯಾಪಾರ ಮಾಡುತ್ತಾಳೆ ಎಂದರೆ ಸಾಕ್ಷಿಯು ಆರೋಪಿತಳಿಗೆ ಅವಳ ಗಂಡನ ಪಿಂಚಣಿ ಬರುತ್ತದೆ ಎಂದು ನುಡಿಯುತ್ತಾರೆ.

ಆರೋಪಿತಳು ನನ್ನ ಅಳಿಯ ಹತ್ತಿರ ಬಡ್ಡಿಗಾಗಿ ಹಣ ಪಡೆಯುತ್ತಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಾನು, ನನ್ನ ಮಗಳು ಮತ್ತು ನನ್ನ ಅಳಿಯ ಒಟ್ಟಿಗೆ ಇರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಬೇರೆ ಇರುತ್ತೇನೆಂದು ನುಡಿಯುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೇಳಿದ್ದು, ಮುಂದುಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

CC No.:999/2018
P.W.:1